# ಸನ್ಯಾಸಿ ಮತ್ತು ಸಂತ

ಜಗತ್ತಿನ ಚರಿತ್ರೆಯಲ್ಲಿ ಸನ್ಯಾಸಿಯಷ್ಟು ಗಮನ ಸೆಳೆದವನು ಮತ್ತೊಬ್ಬನಿಲ್ಲ. ಅವನು ಮಂತ್ರವಾದಿಯ ರೂಪದಲ್ಲಿ, ಪೂಜಾರಿ - ಪಾದ್ರಿಯ ಧಿರಿಸಿನಲ್ಲಿ, ಮಠಾಧೀಶನ ಗತ್ತಿನಲ್ಲಿ, ದೇವ ಮಾನವನ ಮೋಹಕತೆಯಲ್ಲಿ, ಸಂತನ ಸಾತ್ವಿಕತನದಲ್ಲಿ, ಅಧ್ಯಾತ್ಮ ಚಿಂತಕನ ಹೊಳಪಿನಲ್ಲಿ ಕಾಣಿಸಿಕೊಂಡಿದ್ದಾನೆ. ರಾಜ ಮಹಾರಾಜರು ಅವನ ಕಾಲ್ಗೆರಗಿ ಅವನ ಸಲಹೆ ಸೂಚನೆ ಪಡೆಯುತ್ತಾರೆ; ಜನ ಸಾಮಾನ್ಯರಂತೂ ಅವನ ಬಗ್ಗೆ ಭಯ ಭಕ್ತಿಯಿಂದ ತಲೆಬಾಗಿ ನಡೆದುಕೊಳ್ಳುತ್ತಾರೆ. ತ್ಯಾಗಿಯಂತೆ ಕಂಡರೂ ಭೋಗಿಯಂತೆ ಬದುಕುವ ಇವನು ವೈಚಾರಿಕ ಯುಗದಲ್ಲೂ ಕೂಡ ಯಾರಿಗೂ ಕಡಿಮೆಯಿಲ್ಲದಷ್ಟು ಸುಖಲೋಲುಪ್ತತೆಯಲ್ಲಿ ಮುಳುಗೇಳುತ್ತಿದ್ದಾನೆ. ಜಗತ್ತಿನಲ್ಲಿ ಇಂದು ಶ್ರೀಮಂತರಿಗೆ ಕೊರತೆಯಿಲ್ಲ. ಆದರೆ ಅವರಿಗೆ ಅವರದೇ ಆದ ಒತ್ತಡ, ಸಿಕ್ಕುಗಳು, ಹೊಣೆಗಾರಿಕೆ ಇದ್ದೇ ಇದೆ. ಹೆಚ್ಚು ಕಡಿಮೆಯಾದರೆ ಕಾನೂನಿನ ಕತ್ತರಿಯಲ್ಲಿ ನರಳಬೇಕಾಗುತ್ತದೆ. ಆದರೆ ಇಂಥ ಹೊಣೆಗಾರಿಕೆ ಸನ್ಯಾಸಿಗೆ ಇದ್ದಂತೆ ತೋರುವುದಿಲ್ಲ. ಅವನು ಯಾರಿಗೂ ಬಾಧ್ಯನಲ್ಲ; ಯಾರಿಗೂ ಲೆಕ್ಕ ಕೊಡಬೇಕಾಗಿಲ್ಲ. ಏಕೆಂದರೆ ಈ ಧರ್ಮಗುರು ನೈತಿಕ ನೆಲೆಯಲ್ಲಿಯೇ ಇರುತ್ತಾನೆಂದು ಲೋಕವನ್ನು ನಂಬಿಸಲಾಗಿದೆ. ಅದು ನೈತಿಕ ಆವರಣದ ನಡುವೆಯೇ ಜಾತಿ ಮತ ಧರ್ಮಗಳೆಂಬ ಕಂಪಾರ್ಟುಮೆಂಟುಗಳನ್ನು ನಿರ್ಮಿಸಿಕೊಂಡು ಸಂಕೀರ್ಣವೂ ಸೂಕ್ಷ್ಮವೂ ಆಗಿ, ಅದನ್ನು ಮುಟ್ಟಿದರೆ, ಕೆದಕಿದರೆ ಸಾಮಾಜಿಕ ಸ್ವಾಸ್ಥ್ಯವೇ ಹಾಳಾಗುವಂಥ ಸ್ಥಿತಿಯನ್ನು ನಿರ್ಮಿಸಿಕೊಂಡಿದೆ. ಆದ್ದರಿಂದ ಈ ಧಾರ್ಮಿಕ ಸಂಸ್ಥಾ ರೂಪದ ಯಾವುದೇ ಅಂಗವನ್ನು ಕೆದಕಲು ಆಳುವ ವ್ಯವಸ್ಥೆ ಹೆದರುತ್ತದೆ. ಕೆದಕುವ ಬದಲು ಅಪ್ಪಿಕೊಂಡು ಶಾಮೀಲಾಗುವುದರಿಂದ ಲಾಭವಿದೆಯೆಂದು ಅದು ಅನುಭವದಿಂದ ಕಂಡುಕೊಂಡಿದೆ.

ಹಾಗಾದರೆ ಸನ್ಯಾಸವೆಂದರೇನು? ಕೊರೆಯುವಿಕೆ, ವಿರಕ್ತಿ, ವೈರಾಗ್ಯ, ತ್ಯಜಿಸುವಿಕೆ- ಮುಂತಾದ ಸಂಸಾರ ವಿಮುಖಿ ಅರ್ಥಗಳಿವೆ. ಸನ್ಯಾಸವು ಸಂಪೂರ್ಣವಾಗಿ ಐಹಿಕ ಸುಖವನ್ನು ತ್ಯಾಗ ಮಾಡಬೇಕೆಂದು ಹೇಳುತ್ತದೆ. ಆದರೆ ಇಂದಿನ ಸನ್ಯಾಸಿ ಯಾವ ಭೋಗಾಸಕ್ತ ಸಂಸಾರಿಗಿಂತಲೂ ಮಿಗಿಲಾದ ಬಂಧನದಲ್ಲಿ, ಲೌಕಿಕದಲ್ಲಿ ಮುಳುಗಿದ್ದಾನೆ. ಅವನ ಶ್ರಮವಿಲ್ಲದ ಜೀವನಶೈಲಿ, ಪುಷ್ಕಳವಾದ ಭೋಜನ, ತಿರುಗಾಡಲು ಮೈ ಕೈ ಅಲುಗಾಡದ ವೈಭವದ ಕಾರುಗಳು- ಹೆಲಿಕಾಪ್ಟರ್‌ಗಳು, ಕೂರಲು ಜೀಕಾಲಿ ಮಾಡುವ ತರತರದ ವಿನ್ಯಾಸದ ಜೋಕಾಲಿಗಳು, ಮಲಗಲು ಅತ್ಯಂತ ಮೃದುವಾದ ಹಾಸಿಗೆ- ಇಂಥ ಸುಖಕ್ಕೆ ಪಕ್ಕಾದ ಮೈಮನಸ್ಸು ವಿರಕ್ತಿಯನ್ನು ಹೊಂದುವುದಾದರೂ ಹೇಗೆ? ಸುಖ ಚಟವಿದ್ದ ಹಾಗೆ. ಇಷ್ಟು ಸಿಕ್ಕಿದರೆ ಅಷ್ಟು ಬೇಕೆನ್ನಿಸುವ ಆಸೆಯನ್ನು ಹುಟ್ಟಿಸುತ್ತದೆ. ಅದಕ್ಕೆ ತೃಪ್ತಿಯೆಂಬುದು ಇಲ್ಲವೇ ಇಲ್ಲ. ಸುಖದ ಆಸೆ ಒಂದು ಮನೋ ರೋಗವಾಗಿ ಪರಿವರ್ತಿತವಾಗಿ ವ್ಯಕ್ತಿಯನ್ನು ನೈತಿಕತೆಯ ಎಲ್ಲ ದಾರಿಗಳನ್ನು ಬಿಡಲು ಪ್ರೇರೇಪಿಸುತ್ತದೆ. ಸನ್ಯಾಸಿಯಾದವನು ಇಂಥ ಸುಖದ ಚಟಕ್ಕೆ ಬಿದ್ದದ್ದೇ ಆದರೆ ಅವನು ಡಾಂಬಿಕನಾಗುತ್ತಾನೆ. ಇಬ್ಬಗೆಯ ಜೀವನವನ್ನು ನಡೆಸುವುದು ಅನಿವಾರ್ಯವಾಗುತ್ತದೆ. ಜಗದ ಕಣ್ಣಿಗೆ ಒಂದು ರೂಪ; ಅಂತರಂಗದಲ್ಲಿ ಮತ್ತೊಂದು ರೂಪ. ತನ್ನ ಲೌಕಿಕ ಲಾಲಸೆಗಳನ್ನು ಪೂರೈಸಿಕೊಳ್ಳಲು ಅವನು ಬಹುರೂಪಿಯಾಗುತ್ತಾನೆ. ತನ್ನ ಸುತ್ತ ಸುಳ್ಳುಗಳನ್ನು ಸೃಷ್ಟಿಸುತ್ತಾನೆ; ಭ್ರಮೆಯ ಪವಾಡಗಳನ್ನುಂಟು ಮಾಡುತ್ತಾನೆ. ಜನರ ಅಜ್ಞಾನ, ಮೌಢ್ಯ ಮತ್ತು ನಂಬಿಕೆಗಳನ್ನು ಬಳಸಿಕೊಂಡು ತನ್ನ ಸುತ್ತಲಿನ ಸಮಾಜವನ್ನು ಅವೈಚಾರಿಕಗೊಳಿಸುತ್ತಾ, ಮಿಥ್ಯಾ ಪ್ರಪಂಚವೊಂದನ್ನು ತೋರಿಸುತ್ತಾ ಜನ ವಿರೋಧಿಯಾಗುತ್ತಾನೆ. ಈ ಜನ ವಿರೋಧಿ ಮುಖ ಜನರಿಗೆ ಅರ್ಥವಾಗದ ಹಾಗೆ ಅವನು ಸದಾ ಎಚ್ಚರವಹಿಸುತ್ತಾನೆ. ತನ್ನನ್ನು ತಾನು ರಕ್ಷಿಸಿಕೊಳ್ಳಲು ಶ್ರೀಮಂತರನ್ನು, ಆಳುವವರನ್ನು ತನ್ನ ಸುತ್ತ ಇಟ್ಟುಕೊಂಡಿರುತ್ತಾನೆ. ಅವರಿಗೂ ಭೋಗ ಬದುಕಿನ ರುಚಿ ತೋರಿಸುತ್ತಾ ಅವರಿಗೆ ನೆರವಾಗುತ್ತಿರುತ್ತಾನೆ.

ಇಂಥ ಕಪಟ ಸಂನ್ಯಾಸಿಗಳನ್ನು ನಮ್ಮ ಕನ್ನಡ ಸಾಹಿತ್ಯ- ಸಾಂಸ್ಕೃತಿಕ ಲೋಕ ಚರಿತ್ರೆಯುದ್ದಕ್ಕೂ ವಿಡಂಬಿಸುತ್ತಲೇ, ಪ್ರಶ್ನಿಸುತ್ತಲೇ ಬಂದಿದೆ. ವಚನಕಾರರು, ದಾಸರು ಈ ನಿಟ್ಟಿನಲ್ಲಿ ಮಿಗಿಲಾದ ಕೆಲಸ ಮಾಡಿದ್ದಾರೆ. ಆಧುನಿಕ ಲೇಖಕರಾದ ಶಿವರಾಮ ಕಾರಂತ, ಕುವೆಂಪು, ಬೀಚಿ, ಬಸವರಾಜ ಕಟ್ಟೀಮನಿ- ಮುಂತಾದವರು ಕತೆ, ಕಾದಂಬರಿ, ವೈಚಾರಿಕ ಕೃತಿಗಳನ್ನು ಬರೆದು ಸನ್ಯಾಸಿಗಳ ಕಪಟವನ್ನು ಬಯಲಿಗೆಳೆದಿದ್ದಾರೆ. ಆದರೂ ಸನ್ಯಾಸಿಗಳು ಪರಿವರ್ತಿತವಾದಂತೆ ತೋರುವುದಿಲ್ಲ.

ಈ ಸಾಂಸ್ಥಿಕ ರೂಪದ ಅಧಿಪತಿಗಳಾದ ಸನ್ಯಾಸಿಗಳಿಗೆ ಸಮಾನಾಂತರವಾಗಿ ನಮ್ಮ ದೇಶದಲ್ಲಿ ಸಂತರ ಪಡೆಯೇ ಚರಿತ್ರೆಯುದ್ದಕ್ಕೂ ಇದೆ. ಅವರಿಗೆ ಜಾತಿ ಮತ ಧರ್ಮಗಳ ಕಟ್ಟುಗಳಿಲ್ಲ; ಮಡಿ ಮೈಲಿಗೆಗಳ ತಾರತಮ್ಯವಿಲ್ಲ. ಸ್ನಾನ ಜಪತಪಗಳೆಂಬ ವ್ರತಗಳಿಲ್ಲ. ಅನ್ನ ಆಹಾರಾದಿಗಳ ಬಗ್ಗೆ ನಿಯಮಗಳಿಲ್ಲ. ಒಂದು ನಿರ್ದಿಷ್ಟ ನೆಲೆಯಿಲ್ಲ; ಗೊತ್ತು ಗುರಿಯಿಲ್ಲ, ನಿಜವಾದ ಬಂಧನ ಮುಕ್ತರು, ವಿರಾಗಿಗಳು. ಎಲ್ಲ ಐಹಿಕ ಸುಖಗಳನ್ನು ತೊರೆದವರು. ಜಗದ ಕಣ್ಣಿಗೆ ತಿರುಕರಂತೆಯೂ ಹುಚ್ಚರಂತೆ ಕಾಣುವಂಥವರು. ಇವರನ್ನ ಸಂತರೆಂದೂ ಜೋಗಿಗಳೆಂದೂ ಕರೆಯಬಹುದು.

ನಿಜವಾದ ಸನ್ಯಾಸಿ ಸದಾ ಸಮಾಜದ ಆತ್ಮೋನ್ನತಿಯ ಬಗ್ಗೆ ಚಿಂತಿಸುತ್ತಿರುತ್ತಾನೆ; ಲೌಕಿಕ ಬದುಕು ಹಸನಾಗುವ ಮಾರ್ಗಗಳ ಬಗ್ಗೆ ಹುಡುಕಾಟ ನಡೆಸುತ್ತಿರುತ್ತಾನೆ. ತನ್ನ ಭೌತಿಕ ಸುಖವನ್ನು ನಿರಾಕರಿಸುತ್ತಾ, ಸಮುದಾಯ ಸುಖವನ್ನು ಅಪ್ಪಿಕೊಳ್ಳುತ್ತಾ, ಅಂತಿಮದಲ್ಲಿ ಅದರಿಂದಲೂ ಬಿಡಿಸಿಕೊಂಡು ಆತ್ಮೋನ್ನತಿಯ ಸಾಧನೆಯಲ್ಲಿ ನಿರತನಾಗಿ ಕೊನೆಗೆ 'ಇಲ್ಲ'ವಾಗುವ ಪ್ರಕ್ರಿಯೆಯೆ ಸನ್ಯಾಸಿ ಜೀವನದ ಗುರಿ.

■ ಶಿಕಾಕು

# ಮಾತೇ ಮುತ್ತು

★ ಮಹತ್ತಾದ ಕಲೆಗೆ ಅತಿ 'ಸ್ಪಷ್ಟತೆ' ಒಂದು ನ್ಯೂನತೆ; ಅತಿ 'ಅಸ್ಪಷ್ಟತೆ' ಒಂದು ದೋಷ.

-ಕುವೆಂಪು

★ ನಾಟಕರಂಗ, ಅಭಿನಯ ಕಲೆ ಈಗ ತುಂಬಾ ಮುಂದುವರೆದಿದೆ. ಪ್ರೇಕ್ಷಕರಲ್ಲಿ ವಿಮರ್ಶಾತ್ಮಕ ಬುದ್ಧಿ ಹೆಚ್ಚುತ್ತಿದೆ. ಹೀಗಾಗಿ ಕಲಾವಿದರು ತಮ್ಮ ಅಭಿನಯ ಪಟುತ್ವವನ್ನು ಹೆಚ್ಚಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

-ಬಿ.ಜಯಮ್ಮ

* ಒಂದು ರೀತಿಯಲ್ಲಿ ರಂಗಭೂಮಿ ಅನಾದಿ ಕಾಲದ್ದು. ರಂಜನೆಯಷ್ಟೇ ಅಲ್ಲ; ಜ್ಞಾನ ಸಾಧನೆಯನ್ನೂ ರಂಗಭೂಮಿ ಒದಗಿಸುತ್ತದೆ. ಇದನ್ನು ಪಂಚಮವೇದ ಎಂದೂ ಕರೆಯುತ್ತಾರೆ.

-ಶ್ರೀರಂಗ

★ ಕಲಾವಿದ ಸುಖಜೀವಿ. ಪ್ರಪಂಚದಿಂದ ನಿರಾಸಕ್ತ. ಆತ್ಮಾನಂದದಲ್ಲಿ ನಿಮಗ್ನನಾಗಿ ಬ್ರಹ್ಮಾನಂದ ಪಡೆಯುವ ರಸಋಷಿ.

-ಹುಲಿಮನೆ ಸೀತಾರಾಮಶಾಸ್ತ್ರಿ

★ ಭಾರತದ ಇತಿಹಾಸ ಕೇವಲ ರಾಜರ ದಂಡಯಾತ್ರೆ, ರಾಜ್ಯ ವಿಸ್ತರಣದ ಕಥೆಯಲ್ಲ. ಭಾರತದ ಇತಿಹಾಸ ಕಟ್ಟಿದವರು ಅದರ ಋಷಿಗಳು, ಕವಿಗಳು ಹಾಗೂ ಕಲಾವಿದರು.

-ಅನಕೃ

★ ಯಾವ ಮಧುರ ಶಬ್ದ ಮನುಷ್ಯನನ್ನು ಭಾವ ಪರವಶನಾಗಿಸುತ್ತದೆಯೋ, ಯಾವುದು ಕೇಳಲು ಇಂಪಾಗಿರುತ್ತದೆಯೋ- ಅದೆಲ್ಲವೂ ಸಂಗೀತ.

-ಪಿ.ಕಾಳಿಂಗರಾವ್

★ ಯಾರು ಹಳ್ಳ ತೋಡುವರೋ ಅವರೇ ಅದರಲ್ಲಿ ಬೀಳುವರು!

-ಬೈಬಲ್

★ ನಟನೆ ಒಂದು ತಪಸ್ಸು. ತನ್ನ ನೈಜ ವ್ಯಕ್ತಿತ್ವವನ್ನು ಮರೆಯದೆ ಇರುವಂತಹ ಪರಕಾಯ ಪ್ರವೇಶದ ವಿದ್ಯೆ- ನಟನೆ.

-ಬಳ್ಳಾರಿ ರಾಘವ

★ ಯಾರಿಗೂ ಉಪದೇಶ ಮಾಡಬೇಡ; ದಡ್ಡರು ಅದನ್ನು ಗಮನಿಸುವುದಿಲ್ಲ, ಜಾಣರಿಗೆ ಅದರ ಅವಶ್ಯಕತೆ ಇಲ್ಲ.

-ವಾಷಿಂಗ್‌ಟನ್ ಪೋಸ್ಟ್ ಪತ್ರಿಕೆ

★ ಹಣ್ಣನ್ನು ತಿನ್ನಬೇಕಾದರೆ ಹೂವನ್ನು ರಕ್ಷಿಸು.

-ಬಲ್ಗೇರಿಯಾ ಗಾದೆ